Women researchers to rule as agri HEIs see 53.4% rise in PhD enrolment

Female candidates may change agricultural research with a significant focus on innovation, modern agricultural techniques and sustainable farming practices

Divyansh.Kumar
@timesofindia.com

The academic environment has improved for women, but when it comes to fieldwork and practical exposure, challenges persist

The agriculture sector, which has been traditionally a male-dominated field, has seen an encouraging shift as more women have enrolled in PhD programmes. The latest data from the Indian Council of Agricultural Research (ICAR) reveals that women comprised nearly half of all students in agricultural higher education for the 2023-24 academic year. According to the figures, female participation stands at 46% in undergraduate programmes, 49.5% in postgraduate courses, and a commanding 53.4% in research-intensive PhD programmes.

Narrowing gender gap

The rise in female students is challenging long-held gender roles in agricultural education and research. States such as Bihar, Kerala, and Rajasthan collectively contribute over 50% of the female UG cohort. Seema Jaggi, assistant, director general, Human Resource Development, ICAR, says, "The increased presence of women in agricultural studies is not just a reflection of academic merit, it is a transformative force that is gradually redefining leadership and innovation in agriculture." More female candidates enrolling in PhD courses underline a changed trajectory in agricultural research with a significant focus on innovation, modern agricultural techniques and sustainable farming.

Necessary interventions

While there has been a rise in interest among girls, states such as Gujarat, Jammu and Kashmir, and northeast region are still struggling to have more women enrolled in research. "To address this, targeted measures are needed to ensure all regions benefit from increased participation in agricultural education. Challenges remain in helping women complete their degrees and step into leadership roles," says Jaggi.

Robust support, mentorship, career counselling, and flexible learning options, are crucial to retain female students amid ongoing cultural barriers. "Expanding financial incentives and scholarships is vital, with tailored outreach for regions with lower enrolment and collaboration with local stakeholders. Agricultural institutions should incorporate gender-sensitive curricula and inclusive teaching methods to promote diversity in research," she adds.

In a chat with *Education Times*, RC Agrawal, deputy director general, Agricultural Education, ICAR, says, "Our policy initiatives have fostered a merit-based environment, ensuring that talented young women from diverse backgrounds can compete on an equal footing. The scholarship schemes have not only eased financial constraints but have also contributed to a noticeable improvement in academic excellence."

Local administrative support in states including Bihar, Kerala, and Rajasthan has helped significantly in attracting more women researchers. Regional educational policies, coupled with socio-economic factors and robust community support, have led to higher participation rates in these regions. "To address the logistical challenges faced by agricultural universities located in rural areas, ICAR has taken steps to provide better residential facilities. Out of a total of 245 hostels, 140 are dedicated exclusively to female students in these universities. In the last decade, we have worked on improving hostel facilities to support female students and researchers," Agrawal adds.



Ground realities

Despite the encouraging statistics, challenges persist beyond the academic sphere. Bhoomika Behal, marketing specialist, Savannah Seeds, says, "The academic environment has improved for women, but when it comes to fieldwork and practical exposure, the challenges persist. Pay scales, field experience, and overall recognition still tend to favour men. There's a disparity between what is achieved in academia and the opportunities available in practice." There is a need for structural changes that bridge the gap between academic success and professional growth, adds Behal.

Critical crossroads

While the rise in female enrolment is a promising development, the journey toward true gender parity is far from complete. "Structural barriers, cultural biases, and the need for targeted career support remain pressing issues. Expanding financial incentives, enhancing mentorship programmes, and implementing flexible learning options are essential steps to ensure that the academic gains translate into tangible improvements in workplace equity and leadership roles," Behal adds.

Cultivating new pathways



Source: ICAR

Times of Ind pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in

ಪ್ರಸಕ್ತ ಸಾಲಿನಲ್ಲಿ 100 ಟನ್‌ಗೂ ಅಧಿಕ ಮಾವು ರಫ್ತು ಗುರಿ | ಈ ಬಾರಿ ರೋಗ ಬಾಧೆ ಇಲ್ಲ

ಮಾರುಕಟ್ಟೆಗೆ ಬರಲಿದೆ ಗುಣಮಟ್ಟದ ಮಾವು

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesofindia.com

ರಾಜ್ಯದಲ್ಲಿ ಈ ಬಾರಿ ಮಾವಿನ ಬೆಳೆಗೆ ರೋಗಬಾಧೆಗಳು ಕಡಿಮೆ. ಜತೆಗೆ ಜಿಗಿಹುಳದ ಬಾಧೆಯೂ ಇಲ್ಲ. ಹೀಗಾಗಿ, ಗುಣಮಟ್ಟದ ಮಾವಿನ ಫಸಲು ಬರಲಿದ್ದು, ಕಳೆದ ವರ್ಷಕ್ಕಿಂತ ಹೆಚ್ಚಿನ ಮಾವಿನ ಹಣ್ಣನ್ನು ವಿದೇಶಗಳಿಗೆ ರಫ್ತು ಮಾಡಲು ಸಿದ್ಧತೆಗಳು ನಡೆಯುತ್ತಿವೆ.

ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತವು ರೈತರ ನೇತೃತ್ವದಲ್ಲಿ ಈ ಬಾರಿ 100 ಟನ್‌ಗೂ ಅಧಿಕ ಪ್ರಮಾಣದ ಮಾವನ್ನು ರಫ್ತು ಮಾಡಲು ನಿರ್ಧರಿಸಿದೆ. ರಫ್ತು ಪ್ರಕ್ರಿಯೆಗೆ ಪೂರಕವಾಗಿ ರಾಜ್ಯದಲ್ಲಿ ಮಾನ್ಯತೆ ಪಡೆದ ಎರಡು ಪ್ಯಾಕ್ ಹೌಸ್‌ಗಳಿದ್ದು, ಮುಂದಿನ ತಿಂಗಳಲ್ಲಿ ರಾಮನಗರದಲ್ಲಿ ಒಂದು ಪ್ಯಾಕ್ ಹೌಸ್ ತೆರೆಯಲು ನಿಗಮ ಮುಂದಾಗಿದೆ. ಅಪೇಡಾ, ಕೆಪೆಕ್ ಮತ್ತಿತರ ಸಂಸ್ಥೆಗಳ ಮುಖೇನ ಮಾವು ರಫ್ತು ಮಾಡಲಾಗುತ್ತದೆ.

ಕಳೆದ ಬಾರಿ 60 ಮೆಟ್ರಿಕ್ ಟನ್ ಮಾವು ರಫ್ತು ಮಾಡಲಾಗಿತ್ತು. ಪ್ರಸಕ್ತ ಸಾಲಿನಲ್ಲಿ ಮಾವಿಗೆ ಜಿಗಿಹುಳದ ಬಾಧೆಯಿಲ್ಲ. ಯಾವುದೇ ರೋಗ- ರುಜಿನಗಳು ಕಂಡು ಬಂದಿಲ್ಲ. ಜತೆಗೆ, ಬಿಸಿಲಿನ ಝಳ ಹೆಚ್ಚಾಗಿರುವುದರಿದ ಹೂವು, ಕಾಯಿ ಉದುರುವುದನ್ನು ತಡೆಯಲು ರೈತರು ಮಾವಿನ ಸಸಿಗಳಿಗೆ ನೀರುಣಿಸುತ್ತಿದ್ದಾರೆ. ಹೀಗಾಗಿ, ಈ ಬಾರಿ ಗುಣಮಟ್ಟದ ಮಾವು ಬರಲಿದ್ದು, ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡುವ ಗುರಿ ಹೊಂದಲಾಗಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಜಿ. ನಾಗರಾಜ್ ತಿಳಿಸಿದರು.


V-karnataka Pg 09

ಶುಭ ಸುದ್ದಿ

ರಫ್ತಾಗುವ ಹಣ್ಣಿನ ತಳಿ: ಆಲ್ಫಾನ್ಸೊ ಬಾದಾಮಿ, (ಕರ್ನಾಟಕ, ಮಹಾರಾಷ್ಟ್ರ), ಬಂಗನಪಲ್ಲಿ (ಆಂಧ್ರಪ್ರದೇಶ , ಕರ್ನಾಟಕ), ಕೇಸರ್ (ಮಹಾರಾಷ್ಟ್ರ ಗುಜರಾತ್), ದಶೇರಿ (ಉತ್ತರ ಭಾರತ), ತೋತಾಪುರಿ -ಪಲ್ಪ್ (ಕರ್ನಾಟಕ), ಲಾಂಗ್ರಾ ಹಣ್ಣು ರಫ್ತಾಗುತ್ತದೆ. ಗಾಲ್ಫ್ ದೇಶಗಳು, ಬಾಂಗ್ಲಾದೇಶ, ಲಂಡನ್, ಸೌದಿ ಅರೇಬಿಯಾ, ಕುವೈತ್, ಸಿಂಗಾಪುರ, ಕತಾರ್ ಮತ್ತು ಅಮೆರಿಕ ಮತ್ತಿತರ ರಾಷ್ಟ್ರಗಳಿಗೆ ಗುಣಮಟ್ಟದ ತಾಜಾ ಮಾವಿನ ಹಣ್ಣು ರಫ್ತಾಗುತ್ತದೆ.

1.49 ಲಕ್ಷ ಹೆಕ್ಟೇರ್‌ನಲ್ಲಿ ಮಾವು: ರಾಜ್ಯದಲ್ಲಿ 1.49 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಏರು ಹಂಗಾಮಿನಲ್ಲಿ ಸುಮಾರು 12-15 ಲಕ್ಷ ಟನ್ ಹಾಗೂ ಇಳಿ ಹಂಗಾಮಿನಲ್ಲಿ 7-8 ಲಕ್ಷ ಟನ್ ಹಣ್ಣು ಉತ್ಪಾದನೆಯಾಗುತ್ತದೆ. ರಾಜ್ಯದಲ್ಲಿ ಮುಖ್ಯವಾಗಿ ಮೂರು ಮಾವು ಬೆಳೆಯಲಾಗುತ್ತದೆ. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು ಹಾಗೂ ರಾಮನಗರ ಜಿಲ್ಲೆಗಳನ್ನು ಒಂದನೇ ವಲಯ ಎಂದು ಗುರುತಿಸಲಾಗಿದೆ. ಈ ವಲಯದಲ್ಲಿ ಶೇ.75 ರಷ್ಟು ಮಾವು ಬೆಳೆಯಲಾಗುತ್ತದೆ. ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಹಾವೇರಿ ಎರಡನೇ ವಲಯ (ಶೇ.20) ಹಾಗೂ ಬೀದರ್, ಕೊಪ್ಪಳ, ಬಾಗಲಕೋಟ, ಚಿತ್ರದುರ್ಗ, ರಾಣೆಬೆನ್ನೂರು, ದಾವಣಗೆರೆ ಮತ್ತಿತರವು ಮೂರನೇ ವಲಯಕ್ಕೆ ಸೇರುವ ಬಿಡಿ ಪ್ರದೇಶಗಳು. ಇಲ್ಲಿ ಶೇ.5ರಷ್ಟು ಮಾವು ಬೆಳೆಯಲಾಗುತ್ತದೆ.

ಈ ಬಾರಿ ಮಾವು ರುಚಿಯೊಂದಿಗೆ ಗುಣಮಟ್ಟದ ಮಾವಿನ ಹಣ್ಣು ಬರುವ ನಿರೀಕ್ಷೆಯಿದೆ. ರಫ್ತು ವಹಿವಾಟು ಕೂಡ ಹೆಚ್ಚಾಗಲಿದೆ. ಹವಾಮಾನ ವೈಪರೀತ್ಯದಿಂದಾಗಿ ಈ ಬಾರಿ ಮಾವು ಸ್ವಲ್ಪ ತಡವಾಗಲಿದೆ. ಏಪ್ರಿಲ್ ಕೊನೆಯ ವೇಳೆಗೆ ಹಣ್ಣು ಮಾರುಕಟ್ಟೆಗೆ ಬರಲಿದೆ. ನಾವು ಆನ್‌ಲೈನ್ ಮಾರಾಟಕ್ಕೆ ಅನುಕೂಲವಾಗುವಂತೆ ಏಪ್ರಿಲ್‌ನಲ್ಲಿ ಆನ್‌ಲೈನ್ ಪೋರ್ಟಲ್ ತೆರೆಯುತ್ತೇವೆ. ಇದರ ಜತೆಗೆ 14 ರೈತ ಗುಂಪುಗಳು ಬೇರೆಬೇರೆ ಆನ್‌ಲೈನ್ ಪೋರ್ಟಲ್‌ಗಳನ್ನು ಆರಂಭಿಸಿವೆ.

- ಸಿ.ಜಿ. ನಾಗರಾಜ್ ವ್ಯವಸ್ಥಾಪಕ ನಿರ್ದೇಶಕ, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ

ಮೂರು ವರ್ಷ ನಿಗಮದ ಮೂಲಕ ರಫ್ತು ವಹಿವಾಟು

ಮಾವು ನಿಗಮದ ನೇತೃತ್ವದಲ್ಲಿ 2021-22ರಲ್ಲಿ 22 ಮೆಟ್ರಿಕ್ ಟನ್ ಹಣ್ಣು ರಫ್ತಾಗಿದ್ದು, 5.38 ಕೋಟಿ ರೂ. ವಹಿವಾಟು ನಡೆದಿತ್ತು. 2022-23ರಲ್ಲಿ 24 ಮೆಟ್ರಿಕ್ ಟನ್‌ನೊಂದಿಗೆ 6.11 ಕೋಟಿ ರೂ. ವಹಿವಾಟು ನಡೆದಿದ್ದರೆ, 2023-24ರಲ್ಲಿ 59.6 ಮೆಟ್ರಿಕ್ ಟನ್ ಹಣ್ಣು ಮಾರಾಟದೊಂದಿಗೆ 16.89 ಕೋಟಿ ರೂ. ವಹಿವಾಟು ನಡೆದಿತ್ತು. ಈ ಬಾರಿ 100 ಮೆಟ್ರಿಕ್ ಟನ್‌ನ ಗುರಿ ಹೊಂದಲಾಗಿದೆ. ನಾನಾ ರಾಷ್ಟ್ರಗಳಿಗೆ ಹಣ್ಣು ಹೋದರೂ, ಅಮೆರಿಕಕ್ಕೆ ಹೆಚ್ಚಿನ ಪ್ರಮಾಣದಲ್ಲಿ ರಫ್ತಾಗುತ್ತದೆ.

Demand for coffee cultivation grows after prices hit a record high

Coffee board warns that macro climate is crucial for cultivation and economic profit

K.C. Deepika
GONIKOPPA (KODAGU DIST.)

The record prices that coffee hit this year have spurred interest in its cultivation in newer destinations outside of the traditional coffee growing belt in Karnataka such as Kodagu and Chikkamagaluru.

Vishnu Ponnanna from Mookambika Nursery in Virajpet, Kodagu district, said while there is higher interest from H.D. Kote and Mysuru, from where there were queries earlier too, now, he is getting queries from Tumakuru, parts of Chitradurga, and even Hosur in Tamil Nadu.

Subhash Chandra from Ganapathy Nursery in Suntikoppa, North Kodagu, said he has received a large number of queries from Ballari, Davangere, Chitradurga, Tumakuru, Dharmapuri in Tamil Nadu, and Palakkad and Idukki in Kerala as well.

Coffee prices in India hit record prices this year buoyed by a fall in global production, especially in Brazil and Vietnam. At the same time, erratic climatic conditions in India, especially in Karnataka, have also resulted in reduced yield.

K.G. Jagadeesha, CEO and Secretary, Coffee Board of India, told *The Hindu* that the post-harvest estimate for last year is going on, but the final estimate may be around 3.45 lakh tonnes, which is a good yield.

"It was a successful year for farmers. There was 10-15% loss, which was caused by natural vagaries such as high temperature in the beginning of the year followed by heavy rainfall. But the prices doubled, so it offset this loss. In case of Arabica, the prices are double and for robusta, more than double," Mr. Jagadeesha explained.

He further said that as per the cumulative indicator price (ICO Composite Indicator Price, or I-CIP), which is an average of all categories, it was 167 cents/lb (pound) last year, and this year, it is 261 cents/lb.

"The base price itself was very high upon which we have grown. Robusta, which was 130 cents/lb, is now 223 cents/lb, and Arabica was 202 cents/lb, which is now 291 cents/lb," he added.


Coffee prices in India saw a record high this year buoyed by a fall in global production, especially in Brazil and Vietnam. FILE PHOTO

> There was 10-15% loss, which was caused by natural vagaries such as high temperature in the beginning of the year followed by heavy rainfall. But the prices doubled, so it offset this loss. In case of Arabica, the prices are double and for robusta, more than double
>
> **K.G. JAGADEESHA,** CEO and Secretary, Coffee Board of India

This year's forecast

"This year too, the forecast is good for growers," said Mr. Jagadeesha adding, "We have received some rains already and because of the good prices last year, planters have taken care of plants this year and done some irrigation by themselves as well. We will start the post-blossom estimate now. According to the experts, Brazil and Vietnam may not come back to their original production this year as well."

Mr. Jagadeesha warned non-coffee growing belts against getting carried away.

"We promote coffee where our scientific personnel recommend. We don't recommend any place that is sub-optimal or ideal. Some farmers are growing coffee by creating a microenvironment. In the long run, we don't know if it'll be profitable in that area," he said.

"When the coffee board recommends, it should be doable even for the average farmer. Coffee investment is for 30-40 years. So we can't base it on one or two special cases. Requests have come from Chitradurga, Uttara Kannada, and Shivamogga. Even 30-40 years ago, even in Kolar, people tried to grow but didn't succeed. Even at the coffee board (in Bengaluru), we have planted some coffee trees and we get berries once in a few years. It can be considered economically profitable only if there's income over a long period. To prove that, we go only when the macro climate indicators are ideal: average temperature, rainfall, etc. Coffee cannot be grown where elevation is less than 500 metres," he said.

In these areas, the temperature is higher than that in the Western Ghats, rainfall is lesser and there is no proper drainage in case of high rainfall in a short period. Shade is also very important, he further said.

"If a farmer has taken all this into account and is growing coffee, we are neutral; we won't discourage them. Coffee cultivation is deregulated, so anyone can grow coffee. We are not averse, but we won't recommend it unless we are confident that an average farmer can also grow it. These areas according to us are not suitable. If people are getting carried away by the high prices or one or two farmers want to grow it, they can do so at their own risk," said Mr. Jagadeesha.

Hindu Pg 07

ವಿ ರೈತ ಮಿತ್ರ



■ಅಡಕೆ ಬೆಳೆಯೊಂದಿಗೆ ಬೆಳೆಯಬಹುದಾದ ಸೂಕ್ತವಾದ ಅಂತರ ಮತ್ತು ಮಿಶ್ರ ಬೆಳೆಗಳಾವುವು?

| ಶರತ್ ಕುಮಾರ್ ಶಿವಮೊಗ್ಗ

ಅಡಕೆಯು ಬಹುವಾರ್ಷಿಕ ಬೆಳೆಯಾಗಿದ್ದು ಇಳುವರಿ ಪ್ರಾರಂಭವಾಗಲು 5-7 ವರ್ಷಗಳೇ ಬೇಕಾಗುತ್ತದೆ. ಇದರಿಂದ ಪ್ರಾರಂಭದ ವರ್ಷಗಳಲ್ಲಿ ರೈತರಿಗೆ ಯಾವುದೇ ಆದಾಯವನ್ನು ಗಳಿಸಲಾಗುವುದಿಲ್ಲ. ಅಲ್ಲದೆ ಅಡಕೆಯನ್ನು 9x9 ಅಡಿ ಅಂತರದಲ್ಲಿ ನಾಟಿ ಮಾಡುವುದರಿಂದ ಮಧ್ಯದ ಭೂ ಪ್ರದೇಶವು ಸಂಪೂರ್ಣವಾಗಿ ಉಪಯೋಗವಾಗುವುದಿಲ್ಲ. ಆದ್ದರಿಂದ ಭೂಮಿಯನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಮತ್ತು ಪ್ರಾರಂಭದ ವರ್ಷಗಳಲ್ಲಿ ಆದಾಯ ಪಡೆಯಲು ಅಡಕೆಯಲ್ಲಿ ಅಂತರ /ಮಿಶ್ರ ಬೆಳೆಗಳನ್ನು ಬೆಳೆಯುವುದು ಸೂಕ್ತ. ಅಡಕೆಯನ್ನು ನಾಟಿ ಮಾಡಿದ ಪ್ರಾರಂಭಿಕ ವರ್ಷಗಳಲ್ಲಿ(1-6 ವರ್ಷಗಳಲ್ಲಿ) ಬಾಳೆ, ಪಪ್ಪಾಯ, ನುಗ್ಗೆ, ಬೆಂಡೆ, ಹಸಿ ಮೆಣಸಿನಕಾಯಿ, ಅಲಸಂದೆ, ಗೋರಿಕಾಯಿ, ಸುವರ್ಣ ಗಡ್ಡೆ, ಕುಂಠಿ, ಅರಿಶಿಣ ಹಾಗೂ ಹೂ ಬೆಳೆಗಳಾದಲ್ಲಿ ಚೆಂಡು ಹೂ, ಸುಗಂಧರಾಜ, ಕಾಕಡ ಮತ್ತು ಮಲ್ಲಿಗೆಯನ್ನು ಅಂತರ ಬೆಳೆಗಳಾಗಿ ಉತ್ತಮ ರೀತಿ ಬೆಳೆಯಬಹುದು. ನಂತರದ ವರ್ಷಗಳಲ್ಲಿ (7 ವರ್ಷಗಳ ನಂತರ) ಬಾಳೆ, ಕೋಕೋ, ಕರಿಮೆಣಸು, ವಿಳ್ಳೆದಲೆ, ಜಾಯಿಕಾಯಿ, ಏಲಕ್ಕಿ, ಲವಂಗ ಹಾಗೂ ವಿವಿಧ ಔಷಧ ಮತ್ತು ಸುಗಂಧ ದ್ರವ್ಯ ಬೆಳೆಗಳನ್ನು ಮಿಶ್ರ ಬೆಳೆಗಳಾಗಿ ಬೆಳೆದು ಲಾಭ ಪಡೆಯಬಹುದು.

| ಡಾ. ಎಂ.ಶಾಲಿನಿ ತೋಟಗಾರಿಕೆ ತಜ್ಞರು

ಕೃಷಿ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ಪಬ್ಲಿಕ್ ಗಾರ್ಡನ್ ಸಮೀಪ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು. ಇಲ್ಲಿನ ತಜ್ಞರು ಉಚಿತವಾಗಿ ಸಲಹೆ ನೀಡುತ್ತಾರೆ. ನಿಮ್ಮ ಪ್ರಶ್ನೆಗಳನ್ನು 18004250571 / 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸಪ್ ಮಾಡಿ

Vijayavani Pg 09

ಮೋಟೋವಾ ರುಚಿ-ಲಾಭ ವ್ಹಾ ವ್ಹಾ ...

ತಿಪ್ಪಣ್ಣ ಅವಧೂತ ಹುಬ್ಬಳ್ಳಿ


ಅಡಕೆ ಕ್ಷೇತ್ರದಲ್ಲಿ ಸದ್ದಿಲ್ಲದೆ ಪ್ರವೇಶ ಪಶ್ಚಿಮಘಟ್ಟ ವ್ಯಾಪ್ತಿಯಲ್ಲಿ ಪರಿಚಿತ

ತೋಟಗಾರಿಕೆ ಬೆಳೆಯಲ್ಲಿ ಅತೀ ಹೆಚ್ಚು ಲಾಭ ತಂದು ಕೊಡುವಲ್ಲಿ ಅಡಕೆ ಮೇಲುಗೈ ಸಾಧಿಸಿದೆ. ಆದರೆ, ಅಡಕ್ಕಿಂತ ಹೆಚ್ಚು ಲಾಭದಾಯಕ ಬೆಳೆಯೊಂದು ಪಶ್ಚಿಮಘಟ್ಟ ವ್ಯಾಪ್ತಿಯಲ್ಲಿ ಈಗ ಪರಿಚಿತಗೊಂಡಿದೆ. ಇಲ್ಲಿಯವರೆಗೆ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದ ಅಡಕೆ ವ್ಯಾಪ್ತಿ ಕ್ರಮೇಣ ಕುಂಠಿತವಾಗುತ್ತಿದೆ. ಆ ಜಾಗದಲ್ಲೀಗ 'ಮೋಟೋವಾ' ಬೆಳೆ ಸದ್ದಿಲ್ಲದೆ ಹೆಜ್ಜೆ ಇಡುತ್ತಿದೆ. ಕಡಿಮೆ ಖರ್ಚು ಹಾಗೂ ಲಾಭದಾಯಕ ಬೆಳೆಯಾಗಿರುವ ಮೋಟೋವಾ ಕೆಲವೇ ಕೆಲವು ಭಾಗದಲ್ಲಿ ಬೆಳೆಯುವ ಹಣ್ಣಿನ ಜಾತಿಯ ಗಿಡ. ಇದು ನಾಟಿ ಮಾಡಿದಾಗಿನಿಂದ ಫಸಲು ಕೊಡಲು ಕನಿಷ್ಠ ಮೂರ್ನಾಲ್ಕು ವರ್ಷ ಬೇಕು. ಒಮ್ಮೆ ಫಸಲು ಆರಂಭವಾದರೆ 40 ವರ್ಷಗಳವರೆಗೆ ಫಸಲು ಸಿರಿಕ್ಷೆ ಮಾಡಬಹುದು.

ದ.ಕನ್ನಡ, ಉ.ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಭಾಗದ ಕೆಲವೆಡೆ ಈಗಾಗಲೇ ಹಣ್ಣು ಬಿಡುತ್ತಿರುವ ಮರಗಳನ್ನು ಕಾಣಬಹುದಾಗಿದೆ. ಆದರೆ, ಬಿಸಿಲು ನಾಡಿನಲ್ಲಿ ಈ ಜಾತಿಯ ಮರಗಳನ್ನು ಈವರೆಗೆ ಯಾರೊಬ್ಬರೂ ನಾಟಿ ಮಾಡಿಲ್ಲ. ಹೀಗಾಗಿ, ಅಲ್ಲಿ ಮರ ಬೆಳವಣಿಗೆ ಕಾಣುತ್ತದೆಯೋ ಎಂಬುದು ತಿಳಿದಿಲ್ಲ ಎನ್ನುತ್ತಾರೆ ಯಲ್ಲಾಪುರ ತಾಲೂಕಿನ ಕಾನ್‌ಕೊಡ್ಲುವಿನ ಮೋಟೋವಾ ಬೆಳೆಗಾರ ಪ್ರಸಾದ ರಾಮ ಹೆಗಡೆ. ಸದ್ಯದ ಮಾಹಿತಿ ಪ್ರಕಾರ ರಾಜ್ಯದಲ್ಲಿ ಮೋಟೋವಾ ಜಾತಿಯ 5000 ಗಿಡಗಳಿರಬಹುದು. ಹೀಗಾಗಿ ಹಣ್ಣಿಗೆ ಬಲು ಬೇಡಿಕೆ ಇದೆ. ಗಿಡಗಳಲ್ಲಿ ಗೊಂಚಲು ಲೆಕ್ಕದಲ್ಲಿ ಹಣ್ಣುಗಳು ಬೆಳೆಯುತ್ತವೆ. ಒಂದೊಂದು ಗೊಂಚಲಿನಲ್ಲಿ 8, 10, ಅಥವಾ 15 ಕೆಜಿಯಂತೆ ಹಣ್ಣು ಬರುತ್ತವೆ.

ಹಣ್ಣು ಹೇಗಿರುತ್ತದೆ?: ಗಿಡದಲ್ಲಿ ತಿಂಗಳಿಗೊಮ್ಮೆ ಬರುವ ಈ ಹಣ್ಣು ಪುಲಾಸಾನ್, ಲಾಂಗಾನ್ ಅಥವಾ ಲಂಬುಟಾನ್ ರೀತಿಯ ಅಡಕೆಯಂತೆ ಸಿಪ್ಪೆ ಗಾತ್ರ ಇರುತ್ತದೆ. ಆದರೋಳಗಡೆ ಪಲ್ಪ್ ರೀತಿ ಹಣ್ಣು ಇದ್ದು, ತಿನ್ನಲು ರಚಿಕರವಾಗಿರುತ್ತದೆ. ಒಮ್ಮೆ ಇದರ ರುಚಿ ಕಂಡವರು ಮತ್ತೆ ತಿನ್ನಬೇಕು ಎಂಬ ಹಂಬಲ ವ್ಯಕ್ತಪಡಿಸುತ್ತಾರೆ. ಹಣ್ಣಿನ ಸಿಪ್ಪೆ ಒಣಗಿದರೂ 10 ದಿನಗಳವರೆಗೆ ಒಳಗಡೆಯ ಹಣ್ಣು ಹಾಳಾಗುವುದಿಲ್ಲ. ಮೋಟೋವಾ ಮರದಲ್ಲಿ ಎರಡು ರೀತಿ ಇದ್ದು, ಕೇರಳ ಜಾತಿಯದು ಗಿಡ್ಡ ಮರ, ಅದರ ಹಣ್ಣು ಕೂಡ ಚಿಕ್ಕವು. ಹೀಗಾಗಿ, ಆ ಹಣ್ಣಿಗೆ ಮಾರುಕಟ್ಟೆಯಲ್ಲಿ ಅಷ್ಟೊಂದು ಬೇಡಿಕೆಯಿಲ್ಲ. ಮತ್ತೊಂದು ದೊಡ್ಡ ಮರ, ಅದರಂತೆ ಹಣ್ಣು ಕೂಡ ದೊಡ್ಡವು. ಕೆಜಿ ಹಣ್ಣಿಗೆ 450 ರೂ. ನಿಂದ 800 ರೂ. ವರೆಗೂ ಮಾರಾಟವಾದ ದಾಖಲೆ ಇದೆ. ಈ ಮರಕ್ಕೆ ರೋಗಗಳು ಕಡಿಮೆ.

ಹಣ್ಣಿನ ಜತೆಗೆ ಗಿಡವೂ ಮಾರಾಟ: ಪ್ರಸಾದ ರಾಮ ಹೆಗಡೆ ಅವರು ಈ ಬೆಳೆ ಬೆಳೆದಿದ್ದು, ಹಣ್ಣು ಕೂಡ ಮಾರುಕಟ್ಟೆಗೆ ಬಂದಿದೆ. ಇವರು ಹಣ್ಣಿನ ಜತೆಗೆ ಗಿಡಗಳನ್ನೂ ಮಾರಾಟ ಮಾಡುತ್ತಾರೆ. ಕಾಯಿ ಆದ ಒಂದು ಗಿಡಕ್ಕೆ 2500 ರೂ. ನಂತೆ ಮಾರಾಟ ಮಾಡಿದ್ದಾರೆ.

ಮಾಹಿತಿಗೆ ಪ್ರಸಾದ ರಾಮ ಹೆಗಡೆ (ಮೊ.ಸಂ.- 94482-39372) ಅವರನ್ನು ಸಂಪರ್ಕಿಸಬಹುದು.

Vijayavani Pg 07

ಹಲವು ರೋಗಗಳಿಗೆ ರಾಮಬಾಣ



ಮೋಟೋವಾ ಹಣ್ಣನ್ನು ಪಾಸೀಯ ಗಳಲ್ಲಿ ಬಳಸಬಹುದು ಅಥವಾ ಸಿರಪ್ ಗಳಲ್ಲಿ ಸಂರಕ್ಷಿಸ ಬಹುದು. ಈ ಹಣ್ಣಿನಲ್ಲಿ ವಿಟಮಿನ್ ಇ, ಸಿ ಸಮೃದ್ಧವಾಗಿ ರುವುದರಿಂದ ರೋಗನಿರೋಧಕ ಶಕ್ತಿ ವೃದ್ಧಿಗೆ ಸಹಕಾರಿ ಯಾಗಿದೆ. ವಿಟಮಿನ್ ಇ ಒತ್ತಡ ನಿವಾರಿಸಲು, ಕ್ಯಾನ್ಸರ್, ಹೃದಯ ಕಾಯಿಲೆಯ ಅಪಾಯ ತಡೆಗಟ್ಟಲು ಸಹಾಯಕವಾಗುತ್ತದೆ.



ಗಿಡ ಹಾಗೂ ಹಣ್ಣಿನಿಂದ ಆದಾಯ ಬಂದರೆ ಕೃಷಿ ಆದಾಯಕ್ಕೆ ಸಮಾನವಾಗಿ ದುಡಿಯಬಹುದು. ನಮ್ಮ ಭಾಗದಲ್ಲಿ ಆಡಕೆಗೆ ಪರ್ಯಾಯ ಬೆಳೆಯಾಗಿ ಮೋಟೋವಾ ಬೆಳೆಯಲಾಗುತ್ತದೆ. ಇದರಲ್ಲಿ ಖರ್ಚು ಕಡಿಮೆ, ಲಾಭ ಹೆಚ್ಚು. ಈ ಬೆಳೆ ಬಗ್ಗೆ ನಮ್ಮ ಭಾಗದ ರೈತರು ಇನ್ನಷ್ಟು ತಿಳಿದುಕೊಂಡು ಬೆಳೆದರೆ ಒಂದು ಗಿಡದಿಂದ ವರ್ಷಕ್ಕೆ 12000 ರೂ.ವರೆಗೆ ಲಾಭ ಗಳಿಸಬಹುದು.

| ಪ್ರಸಾದ ರಾಮ ಹೆಗಡೆ ಕಾನ್‌ಕೊಡ್ಲು ಹೆಮ್ಮಾಡಿ, ಯಲ್ಲಾಪುರ





ಜಿಲ್ಲಾ ನೋಟ

ಕಾರವಾರ ಜಿಲ್ಲೆ

ಜೇನು ತುಪ್ಪದ ನೆಲೆ

- ಜೇನು ಉತ್ಪಾದನೆಯಲ್ಲಿ ನಾಲ್ಕನೇ ಸ್ಥಾನ
- ಯಲ್ಲಾಪುರದ ಜೇನು ದೇಶದಲ್ಲೇ ಶ್ರೇಷ್ಠ
- ವೈಜ್ಞಾನಿಕ ಜೇನು ಕೃಷಿ ಪದ್ಧತಿಗೆ ಉತ್ತೇಜನ

ನ ವಿನುತಾ ಹೆಗಡೆ ಶಿರಸಿ

ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮಘಟ್ಟ ಪ್ರದೇಶದಲ್ಲಿ ಪ್ರಾಕೃತಿಕವಾಗಿ ಸಾಕಷ್ಟು ಜೇನು ಲಭ್ಯವಾಗಲಿದೆ. ಹಾಗಾಗಿ ಈ ಜಿಲ್ಲೆ ದೇಶದಲ್ಲಿಯ ಜೇನು ಮಂಡಳಿ ವ್ಯಾಪ್ತಿಗೆ ಒಳಪಟ್ಟಿದೆ. ರಾಷ್ಟ್ರೀಯ ಜೇನು ಮಂಡಳಿ ಉತ್ತರ ಕನ್ನಡ ಜಿಲ್ಲಾದ್ಯಂತ ವೈಜ್ಞಾನಿಕ ಜೇನು ಬೇಸಾಯ ಪದ್ಧತಿ ಕುರಿತಂತೆ ಕಾರ್ಯಾಗಾರ ಏರ್ಪಡಿಸಿದೆ.

ಯಲ್ಲಾಪುರದ ಜೇನು

ಇಡೀ ದೇಶದಲ್ಲಿಯೇ ಉತ್ತಮವಾದ ಜೇನು ತುಪ್ಪ ಯಲ್ಲಾಪುರದಲ್ಲಿ ದೊರೆಯಲಿದೆ. ಅಂತೆಯೇ ಕೊಡಗಿನಲ್ಲಿಯೂ ಗುಣಮಟ್ಟದ ಜೇನು ಲಭ್ಯವಾಗಲಿದೆ. ಜೇನು ತುಪ್ಪದಿಂದ ಆರೋಗ್ಯ ವರ್ಧನೆ ಸಾಧ್ಯ ಕೂಡ. ಉತ್ತಮ ಜೇನು ತುಪ್ಪಕ್ಕೆ ಬೇಡಿಕೆ ಇದ್ದೇ ಇದೆ. ಇದೀಗ ವಾಣಿಜ್ಯ ಬೆಳೆಯಾಗಿಯೂ ಗೋಚರಿಸುತ್ತಿದೆ. ಪಾರಂಪರಿಕ ಜೇನು, ಸುಸ್ಥಿರ ಪದ್ಧತಿ ಜೇನು ಕೃಷಿ ಕುರಿತು ಜೇನು ಮಂಡಳಿ ಜಾಗೃತವಾಗಿದೆ.

ಜೇನು ಕೃಷಿ

ಈ ಜೇನು ಕೃಷಿ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಮಧುಕೇಶ್ವರ ಹೆಗಡೆಯವರ ಜೀವನವನ್ನೇ ಬದಲಾಯಿಸಿದೆ. ಹಲವು ಕಾರಣಗಳಿಗೆ ತಮ್ಮ ಆಸ್ತಿ ಕಳೆದು ಕೊಂಡಿದ್ದ ಹೆಗಡೆಯವರು ಈ ಜೇನು ಕೃಷಿಯಿಂದಾಗಿ ಕಳೆದುಕೊಂಡಿದ್ದಕ್ಕಿಂತ ಹತ್ತುಪಟ್ಟು ಗಳಿಸಿದ್ದಾರೆ. ಜೇನು ಕೃಷಿ, ಸಾಕಣೆಯಲ್ಲೇ ಪಳಗಿ ಗೌರವ ಡಾಕ್ಟರೇಟ್ ಕೂಡ ಪಡೆದಿದ್ದಾರೆ. ಇತ್ತೀಚೆಗಷ್ಟೇ ಪ್ರಧಾನಿ ನರೇಂದ್ರ ಮೋದಿ ಕೂಡ ಮನ್ ಕಿ ಬಾತ್‌ನಲ್ಲಿ ಜೇನು ಸಾಕಣೆ ಕುರಿತು ಮಾತನಾಡಿದ್ದಾರೆ.

ಜೇನಿನ ಕುರಿತು

ಹಲವು ಭಗೆಯ ಕೀಟಗಳಲ್ಲಿ ಜೇನು ನೋಣಗಳು ಮಾನವನಿಗೆ ಬಹು ಮುಖ್ಯ ಉಪಕಾರಿ. ಭಾರತ ಪ್ರತಿ ವರ್ಷ 27,000 ಟನ್ ಜೇನು ಉತ್ಪಾದಿಸುತ್ತದೆ. ಆದರಲ್ಲಿ ಶೇ.20ರಿಂದ 25ರಷ್ಟು (7,000 ಟನ್) ಜೇನನ್ನು ರಫ್ತು ಮಾಡಲಾಗುತ್ತಿದೆ. ಒಂದು ಅಂದಾಜಿನಂತೆ ಭಾರತದಲ್ಲಿ 120 ಮಿಲಿಯನ್ ಜೇನು ಕುಟುಂಬಗಳನ್ನು ಸಾಕಬಹುದಾಗಿದೆ. ಇದರಿಂದಾಗಿ 6 ಮಿಲಿಯನ್ ಜನರಿಗೆ ಉದ್ಯೋಗ, 1.2 ಮಿಲಿಯನ್ ಟನ್ ಜೇನು ಉತ್ಪಾದನೆ ಮತ್ತು 15,000 ಟನ್‌ನಷ್ಟು ಮೇಣ ತಯಾರಿಸಬಹುದು ಎಂಬ ಮಾಹಿತಿ ಇದೆ.

> ಉತ್ತರ ಕನ್ನಡ ಜಿಲ್ಲೆಯಲ್ಲಿ ಜೇನಿಗೆ ಅನುಕೂಲಕರವಾದ ವಾತಾವರಣವಿದೆ. ಅತ್ಯಮೂಲ್ಯವಾದ ಸಸ್ಯಗಳೂ ಇಲ್ಲಿದ್ದು ಇವುಗಳಿಂದ ಜೇನು ತಯಾರಾದರೆ ಇಲ್ಲಿಯ ಜೇನು ವಿಶೇಷ. ನಮ್ಮಲ್ಲಿಯ ಜೇನನ್ನು ರಫ್ತು ಮಾಡುವಂತಾಗಬೇಕು. ಆಗ ಆರ್ಥಿಕವಾಗಿ ಹೆಚ್ಚು ಲಾಭ ಮಾಡಬಹುದು. ನಾವು ಈ ಜೇನು ಕಲಬೆರಕೆಯಾಗದಂತೆ ನೋಡಿಕೊಳ್ಳ ಬೇಕು. ಇದು ಅಮೃತಕ್ಕೆ ಸಮಾನ.
> -ಮಧುಕೇಶ್ವರ ಹೆಗಡೆ, ಶಿರಸಿ. ಜೇನು ಕೃಷಿಕ



ಜೇನಿನ ಬಳಕೆ

ವಿದೇಶಗಳಲ್ಲಿ ಜೇನು ಬಳಕೆ 200 ಗ್ರಾಂ ಪ್ರತೀ ಮನುಷ್ಯನಿಗಾದರೆ, ಭಾರತದಲ್ಲಿ ಜೇನು ಬಳಕೆ ಕೇವಲ 8.4 ಗ್ರಾಂ ಮಾತ್ರ. ಹೆಚ್ಚಿನ ಜೇನಿನ ಬಳಕೆ ಔಷಧ ತಯಾರಿಕೆ, ಆಹಾರ ಪದಾರ್ಥಗಳಲ್ಲಿ, ಬೇಕರಿ ಮತ್ತು ಸೌಂದರ್ಯ ವರ್ಧಕಗಳಲ್ಲಿ ಬಳಕೆಯಾಗುತ್ತದೆ.

ನಿರ್ವಹಣೆ

ಜೇನುಕೃಷಿಗೆ ಲಾಭದಾಯಕವಾಗಲು ಜೇನುಕುಟುಂಬಗಳ ನಿರ್ವಹಣೆಯು ಆ ಪ್ರದೇಶದ ಹವಾಮಾನ ಮತ್ತು ಆಹಾರ ಮೇಲೆ ಅವಲಂಬಿತವಾಗಿದೆ. ಎಲ್ಲ ಕಡೆ ಒಂದೇ ರೀತಿಯ ನಿರ್ವಹಣೆ ಕ್ರಮ ಅನುಸರಿಸಲು ಸಾಧ್ಯವಿಲ್ಲ. ಉತ್ತರ ಕನ್ನಡ ಜಿಲ್ಲೆಗಳ ತೋಟದಲ್ಲಿ, ಗುಡ್ಡದಲ್ಲಿ ಜೇನು ಪೆಟ್ಟಿಗೆಯನ್ನು ಇಟ್ಟು ಜೇನು ಸಾಕಲಾಗುತ್ತದೆ.

ಜೇನು ಲಾಭದಾಯಕ

ಜೇನು ಒಂದು ಉದ್ದಿಮೆಯಾಗಿ ಕೈಗೊಂಡಿದ್ದೇ ಆದಲ್ಲಿ ವರ್ಷಪೂರ್ತಿ ಇದರದ್ದೇ ಕಾರ್ಯ ನಿರ್ವಹಿಸಿಕೊಂಡು ಸಾಕಷ್ಟು ಆದಾಯ ಗಳಿಸಬಹುದು. ರೈತ ಕುಟುಂಬಗಳು ಹಾಗೂ ನಿರುದ್ಯೋಗಿಗಳು ಈ ಉಪಕಸುಬನ್ನಾಗಿ ಕೈಗೊಂಡಿದ್ದಾರೆ.

ಜೇನು ಸಾಕಣೆಗೆ ಸೂಕ್ತ ಸ್ಥಳ

ಮಲೆನಾಡಲ್ಲಂತೂ ಯಥೇಚ್ಛವಾಗಿ ನಾನಾ ಬಗೆಯ ಹೂವುಗಳಿಂದ ತುಂಬಿರುವ ಜಾಗವಾದರೆ ಉತ್ತಮ. ಬಲವಾದ ಗಾಳಿ ಬೀಸುವ ಹಾಗೂ ಇರುವೆ, ಗೆದ್ದಲುಗಳಿಂದ ಮುಕ್ತವಿರುವ ಜಾಗ ಅನುಕೂಲ. ಶುದ್ಧ ನೀರು ಸಿಗುವಂತಿರಬೇಕು. ನೆರಳಿರುವ ಹಣ್ಣಿನ ತೋಟವಾದಲ್ಲಿ ಅತ್ಯಂತ ಸೂಕ್ತ.

ಔಷಧೀಯ ಗುಣ

ಜೇನುತುಪ್ಪದ ವಿಶಿಷ್ಟ ಮೌಲ್ಯವೆಂದರೆ ಅದನ್ನು ತಿಂದಾಕ್ಷಣ ಶರೀರದಲ್ಲಿ ಸೇರಿಕೊಳ್ಳಬಲ್ಲದು. ಅದು ಸ್ನಾಯುಗಳಿಗೆ ಬಲ ತುಂಬುವ ಶಕ್ತಿಶಾಲಿ ಇಂಧನ. ಒಂದು ಕಪ್ ತುಂಬಿದ ನೀರಿನಲ್ಲಿ ಎರಡು ಚಮಚದಷ್ಟು ಜೇನನ್ನು ಮಲಗುವ ಮುನ್ನ ಸೇವಿಸುವುದರಿಂದ ಸುಖ ನಿದ್ದೆ ಖಚಿತ. ದಮ್ಮು, ನೆಗಡಿ, ಕೆಮ್ಮು, ಗಂಟಲು ನೋವಿಗೂ ಜೇನು ರಾಮಬಾಣ.



Farmers' body seeks policy solution for duty on onions

After Centre scrapped 20% export duty on onion effective from April 1, the Maharashtra government on Sunday welcomed the move, but the Kisan Sabha said it was too late and sought a policy solution. The Kisan called it "unfortunate" as export restrictions had impacted onion producers adversely. "We welcome the move if this will bring comfort to our onion farmers; however, it can't recover the losses the farmers have faced," a member of the Sabha said. Against this backdrop, the Sabha has urged the government to avoid irregular export bans and export restrictions, not to increase export duty and instead take steps to formulate long-term export policy for onion producers at the international level.

Hindu Pg 12

Viswavani Pg 10

Udayavani Pg 03

ಬೇಸಿಗೆ ಎಫೆಕ್ಟ್: ₹60 ತಲುಪಿದ ಎಳನೀರು ದರ

ಬಿಸಿಲಿನ ದಾಹ ತಣಿಸಿಕೊಳ್ಳಲು ಎಳನೀರು ಮೊರೆ ಹೋಗುತ್ತಿರುವ ಜನ | 2 ತಿಂಗಳ ಹಿಂದೆ 40 ರೂ. ಇದ್ದ ದರ ಇದೀಗ ಹೆಚ್ಚಳ

ಬೇಸಿಗೆ ಹಿನ್ನೆಲೆಯಲ್ಲಿ ಬೇಡಿಕೆ ತಕ್ಕಷ್ಟು ಮಾರುಕಟ್ಟೆಗೆ ಬಾರದ ಎಳನೀರು | ಏಪ್ರಿಲ್, ಮೇ ತಿಂಗಳಲ್ಲಿ ದರ ಮತ್ತಷ್ಟು ಏರಿಕೆ ಸಾಧ್ಯತೆ

■ ರಘು ಕೆ.ಜಿ.

ಉದಯವಾಣಿ ಸಮಾಚಾರ

ಬೆಂಗಳೂರು: ರಾಜಧಾನಿಯಲ್ಲಿ ದಿನದಿಂದ ದಿನಕ್ಕೆ ಬೇಸಿಗೆ ಬಿಸಿಲಿನ ಝಳ ಹೆಚ್ಚುತ್ತಿದೆ. ದಾಹ ತಣಿಸಿಕೊಳ್ಳಲು ಜನತೆ ತಂಪು ಪಾನೀಯಗಳತ್ತ ಮುಖ ಮಾಡುತ್ತಿದ್ದಾರೆ. ಈ ನಡುವೆ ಬೇಸಿಗೆ ಆರಂಭದಲ್ಲೇ ಎಳನೀರಿನ ದರ 60 ರ ಗಡಿ ತಲುಪಿದ್ದು, ಗ್ರಾಹಕರ ಜೇಬು ಸುಡುವಂತೆ ಮಾಡುತ್ತಿದೆ.

ಆರೋಗ್ಯದ ಹಿತ ದೃಷ್ಟಿಯಿಂದ ಸಾಮಾನ್ಯವಾಗಿ ಎಲ್ಲ ಋತುಗಳಲ್ಲಿಯೂ ಎಳನೀರಿಗೆ ಬೇಡಿಕೆ ಹೆಚ್ಚು. ಆದರಲ್ಲೂ ಬೇಸಿಗೆಯಲ್ಲಿ ದೇಹಕ್ಕೆ ತಂಪು, ಆರೋಗ್ಯಕ್ಕೂ ಒಳಿತು ಎಂಬ ಕಾರಣಕ್ಕೆ ಎಳನೀರು ಬಹುಜನರ ಆಯ್ಕೆಯಾಗಿದೆ. ಆದರೆ, ರಾಜಧಾನಿಗೆ ಎಳನೀರಿನ ಪೂರೈಕೆಯಲ್ಲಿ ವ್ಯತ್ಯಯ ಹಾಗೂ ಇಳುವರಿ ಕುಂಠಿತದ ಕಾರಣದಿಂದಾಗಿ ಮೆಜೆಸ್ಟಿಕ್, ಮಲ್ಲೇಶ್ವರ, ರಾಜಾಜಿನಗರ, ಎಂ.ಜಿ.ರಸ್ತೆ, ಕಾರ್ಪೋರೇಷನ್, ವಿಧಾನಸೌಧ, ಹಲಸೂರು ಭಾಗ ಸೇರಿದಂತೆ ಆಯ್ದ ಕಡೆಗಳಲ್ಲಿನ ಚಿಲ್ಲರೆ ವ್ಯಾಪಾರಿಗಳಲ್ಲಿ ಎಳನೀರು ಕನಿಷ್ಠ 50 ರಿಂದ 60 ರೂ.ಗೆ ಮಾರಾಟವಾಗುತ್ತಿದೆ.



ಕಳೆದ 2 ತಿಂಗಳ ಹಿಂದೆ 25, 35, 40 ರೂ. ದರದಲ್ಲಿ ಮಾರಾಟವಾಗುತ್ತಿದ್ದ ಎಳನೀರು ವ್ಯಾಪಾರ ಬೇಸಿಗೆ ಆರಂಭವಾಗುತ್ತಿದ್ದಂತೆ ಏಕಾಏಕಿ 50, 60 ರೂ.ಗೆ ಹೆಚ್ಚಳವಾಗಿದೆ. ಬೆಂಗಳೂರಿನಲ್ಲಿ ಹೆಚ್ಚಾಗಿ ಐಟಿ ಉದ್ಯೋಗಿಗಳು, ವಿದ್ಯಾರ್ಥಿಗಳು, ಆಸ್ಪತ್ರೆ ರೋಗಿಗಳು ಒಳಗೊಂಡಂತೆ ಹೊರಗಡೆ ಪ್ರದೇಶದಲ್ಲಿ ದುಡಿಯುವ ವರ್ಗದ ಜನರು ತಮ್ಮ ದೇಹದ ದಣವಾರಿಸಿಕೊಳ್ಳಲು ಎಳನೀರಿನ ಮೊರೆ ಹೋಗುವುದು ಸಾಮಾನ್ಯ. ಆದರೆ ಸುಡು ಬೇಸಿಗೆ ನಡುವೆ ಎಳನೀರು ದರ ಏರಿಕೆಯಾಗಿರುವುದು ಗ್ರಾಹಕರು ಹೌಹಾರುವಂತೆ ಮಾಡಿದೆ.

ಬೆಂಗಳೂರಿಗೆ ಹೆಚ್ಚಾಗಿ ಚಾಮರಾಜನಗರ, ಮಂಡ್ಯ, ಮದ್ದೂರು, ಹಾಸನ ಮತ್ತು ತುಮಕೂರು ಭಾಗದಿಂದ ಎಳನೀರು ಪೂರೈಕೆಯಾಗುತ್ತದೆ. ಕೆಲವು ಕಡೆಗಳಲ್ಲಿ ಮಳೆಕೊರತೆಯಿಂದಾಗಿ ನಿರೀಕ್ಷಿತ ಫಸಲು ಬಂದಿಲ್ಲ. ಹಾಗಾಗಿ ಮೊದಲಿನಷ್ಟು ಎಳನೀರು ಬೆಂಗಳೂರಿಗೆ ಪೂರೈಕೆಯಾಗುತ್ತಿಲ್ಲ. ನಾವೂ ಸಗಟು ವ್ಯಾಪಾರಿಗಳಿಂದ ಖರೀದಿಸಿ ತಂದು ಮಾರಾಟ ಮಾಡುತ್ತೇವೆ. ಹಾಗಾಗಿ ಎಳನೀರು ದರ ಹೆಚ್ಚು ಎನ್ನುತ್ತಾರೆ ಹಲಸೂರಿನ ಎಳನೀರು ವ್ಯಾಪಾರಿ ಚನ್ನಪ್ಪ.

> ಬೆಂಗಳೂರಿನಲ್ಲಿ ಮಾತ್ರ ಇಷ್ಟೊಂದು ದರ. ಉಳಿದ ಕಡೆಗಳಲ್ಲಿ ಕಡಿಮೆ ಇರುತ್ತದೆ. ಎಳನೀರು ದರ ಏರಿಕೆಯಾದರೂ ಬಿಸಿಲಿನಿಂದ ದೇಹ ತಂಪಾಗಿಡಲು, ದೇಹದ ಸಮತೋಲನಕ್ಕೆ ಹಾಗೂ ಆರೋಗ್ಯ ದೃಷ್ಟಿಯಿಂದ ನಿತ್ಯ ಎಳನೀರು ಸೇವನೆ ಒಳಿತು.
> ● ಗೋಪಾಲ, ಗ್ರಾಹಕ, ಮಲ್ಲೇಶ್ವರ

ಗಾತ್ರಕ್ಕೆ ತಕ್ಕಂತೆ ದರ: ಎಳನೀರಿನ ಗಾತ್ರ ಆಧರಿಸಿ ದರ ನಿಗದಿಪಡಿಸಲಾಗುತ್ತದೆ. ಸಣ್ಣ ಗಾತ್ರಕ್ಕೆ 25 ರಿಂದ 30 ರೂ. ಹಾಗೂ ಮಧ್ಯಮ ಗಾತ್ರಕ್ಕೆ 40 ಹಾಗೂ ದಪ್ಪ ಗಾತ್ರಕ್ಕೆ 50 ರಿಂದ 60 ರೂ. ಇದೆ. ಬೇಸಿಗೆ ಕಾರಣ ಮುಂಬರುವ ತಿಂಗಳಿನಲ್ಲಿ ಎಳನೀರಿನ ದರ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಕಳೆದ 15 ವರ್ಷಗಳಿಂದ ಎಳನೀರು ವ್ಯಾಪಾರ ಮಾಡುತ್ತಿದ್ದೇನೆ. ಬೇಸಿಗೆ ಅವಧಿಯಲ್ಲಿ ಸಾಮಾನ್ಯವಾಗಿ ಬೆಲೆ ಹೆಚ್ಚು ಇರುತ್ತದೆ. ಬೆಲೆ ಹೆಚ್ಚಾದರೂ ಜನ ಆರೋಗ್ಯದ ದೃಷ್ಟಿಯಿಂದ ಕೊಂಡು ಎಳನೀರು ಕುಡಿಯುತ್ತಾರೆ ಎಂದು ಅವರು ಹೇಳಿದರು.

ಕಲ್ಲಂಗಡಿಗೂ ಬೇಡಿಕೆ ಹೆಚ್ಚು: ಬೇಸಿಗೆ ಬಿಸಿಲಿನ ಝಳಕ್ಕೆ ಹೈರಣಾಗುತ್ತಿರುವ ಜನ ನೀರಿನ ಅಂಶವುಳ್ಳ ಕಲ್ಲಂಗಡಿ ಹಾಗೂ ಇತರೆ ಹಣ್ಣಿನ ಜ್ಯೂಸ್‌ಗಳ ಮೊರೆ ಹೋಗುತ್ತಿದ್ದಾರೆ. ಮಲ್ಲೇಶ್ವರ, ಯಶವಂತಪುರ ಎಪಿಎಂಸಿ ಮಾರುಕಟ್ಟೆ ಒಳಗೊಂಡಂತೆ ನಗರದ ರಸ್ತೆ ಬದಿಗಳಲ್ಲಿ ಕಲ್ಲಂಗಡಿ ವ್ಯಾಪಾರ ವಹಿವಾಟು ಜೋರಾಗಿದೆ. ರಾಜ್ಯ ಮಾತ್ರವಲ್ಲದೇ ತಮಿಳುನಾಡು ಭಾಗದಿಂದಲೂ ಕಲ್ಲಂಗಡಿ ರಾಜಧಾನಿಗೆ ಪೂರೈಕೆಯಾಗುತ್ತಿದ್ದು, ಪ್ರತಿ ಕೆ.ಜಿಗೆ ಕನಿಷ್ಠ 30 ರೂ. ದರದಲ್ಲಿ ಮಾರಾಟವಾಗುತ್ತಿದೆ. ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಕಲ್ಲಂಗಡಿ ತಿನ್ನುತ್ತಾರೆ, ಮನೆಗೂ ಕೊಂಡೊಯ್ಯುತ್ತಿದ್ದಾರೆ. ಹೀಗಾಗಿ ವ್ಯಾಪಾರ ಉತ್ತಮವಾಗಿದೆ ಎನ್ನುತ್ತಾರೆ ಗಾಯತ್ರಿ ನಗರದ ಕಲ್ಲಂಗಡಿ ವ್ಯಾಪಾರಿ ರವಿ.